ತಿಂಗಳವಾರು, ವಾರಗಟ್ಟಳಿ, ಯಾವ ದಿನ ನಡೆದಿದೆ ಎಂಬುದನ್ನು ರಾಜ್ಯಪಾಲರ ಭಾಷಣದ ಸಂದರ್ಭದಲ್ಲಿ ತಮ್ಮ ಆದೇಶದ ಮೇರೆಗೆ ಈ ಸಭೆಗೆ ಮಂಡಿಸುತ್ತೇನೆ.

ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳಿಗೆ ಸೇರಿದ ಪ್ರತಿಭಾನ್ವಿತ ಸ್ನಾತಕೋತ್ತರ ಪದವೀಧರರ ನೇರ ನೇಮಕಾತಿ.

217 - ಶ್ರೀ ಎಂ.ಹೆಚ್. ಜಯಪ್ರಕಾಶ್ ನಾರಾಯಣ (ಯಲಹಂಕ) : ಮಾನ್ಯ ಮುಖ್ಯ ಮಂತ್ರಿಗಳು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಹಿಂದಿನ ರಾಜ್ಯ ಸರ್ಕಾರದವರು ಸ್ನಾತಕೋತ್ತರ ಪದವಿಯಲ್ಲಿ ಅತಿ ಹೆಚ್ಚು ಅಂಕ ಗಳಿಸಿ ಉತ್ತೀರ್ಣರಾದ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳನ್ನು ನೇರ ನೇಮಕ ಮಾಡುವ ಆದೇಶ ಮಾಡಿರುವುದನ್ನು ಜಾರಿಗೆ ತರಲಾಗಿದೆಯೇ?*

ಆ) *ಹಾಗಿದ್ದಲ್ಲಿ, ಯಾವ ಯಾವ ಇಲಾಖೆಗಳಲ್ಲಿ ಎಷ್ಟೆಷ್ಟು ಅಭ್ಯರ್ಥಿಗಳನ್ನು ಸರ್ಕಾರ ನೇಮಕ ಮಾಡಿದೆ?*

ಇ) *ಈ ಆದೇಶವನ್ನು ಜಾರಿಗೆ ತಂದ ದಿನಾಂಕದಿಂದ ನೇಮಕಗೊಂಡಿರುವ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳ ಪಟ್ಟಿಯನ್ನು ಒದಗಿಸುವುದು?*

ಈ) *ಈ ಆದೇಶವು ಈಗ ಜಾರಿಯಲ್ಲಿದೆಯೇ ಜಾರಿಯಲ್ಲಿದ್ದರೆ ಸರ್ಕಾರ ಕೈಗೊಂಡ ಕ್ರಮಗಳೇನು?*

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯ ಮಂತ್ರಿಗಳು) :

ಅ) ಹೌದು

ಆ) ಇ) ಪಟ್ಟಿ ಲಗತ್ತಿಸಿದೆ.

ಈ) ಹೌದು.

ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳ ಕೊರತೆ ಪ್ರಮಾಣವನ್ನು ಅನುಸರಿಸಿ 1984-85 ರಿಂದೀಚಿನ ಶೈಕ್ಷಣಿಕ ವರ್ಷಗಳಿಗೆ ಸಂಬಂಧಿಸಿದಂತೆ ನೇಮಕಾತಿಯನ್ನು ಮಾಡುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆ.

ಕರ್ನಾಟಕ ಸಿವಿಲ್ ಸೇರೆ (ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳ ಪ್ರತಿಭಾವಂತರನ್ನು ಕೆಲವೊಂದು ಗುಂಪು 'ಎ' ಮತ್ತು ಗುಂಪು 'ಬ' ಹುದ್ದೆಗಳಿಗೆ ನೇರ ನೇಮಕಾತಿ) ನಿಯಮಗಳು, 1985 ರಡಿ 1982-83ನೇ ಸಾಲಿನ ಆಯ್ಕೆ ಪಟ್ಟಿ

ಕ್ರ. ಸಂ.	ಹೆಸರು ಮತ್ತು ವಿಳಾಸ	ಹುದ್ದೆ	ನೇಮಕಗೊಂಡ ದಿನಾಂಕ
	(ದರ್ಜೆ -1 (ವೃಂದ - 'ಬಿ')		
1.	ಸುಭದ್ರ ಎಂ.ಎಸ್. ನಂ. 120 ಸಾಲ್ಮನೇ ಮುಖ್ಯರಸ್ತೆ ಜಯನಗರ, ಮೈಸೂರು.	ರಾಜ್ಯ ಲೆಕ್ಕ ಪತ್ರ ಇಲಾಖೆಯ ಸಹಾಯಕ ನಿಯಂತ್ರಕರು	7.5.1993
2.	ಗುಮ್ಮಡಿ ವೆಂಕಟೇಶ್ ಕುಮಾರ್ ಟಿ-1 ವಸತಿ ಗೃಹ, ಪಾವಟೆ ನಗರ, ಧಾರವಾಡ	-ಅದೇ-	

3.	ಸಿದ್ಧರಾಜಮ್ಮ ಬಿ.ಎಸ್ ದೇಬಾರ್ ರಸ್ತೆ ರಾಜಕೋಟ್, ಗುಜರಾತ್.	-ಅದೇ-	"
4.	ಎಂ.ಎಸ್. ಜಾರುರಾಮ್ ಗಾಂಧಿನಗರ, ಚಳ್ಳಕೆರೆ, ಚಿತ್ರದುರ್ಗ ಜಿಲ್ಲೆ.	-ಅದೇ-	"
5.	ಅಂಜನ ಮೂರ್ತಿ ಎನ್. ನಂ.3852, ಎಲ್-11, ಕರುಣಾಪುರ, ಗಾಂಧಿನಗರ, ಮೈಸೂರು.	-ಅದೇ-	"
6.	ಎಸ್.ಬಿ. ಶಿವರುದ್ರಪ್ಪ ನಂ.36 - ಎಫ್, ಕೆ.ಇ.ಬಿ. ಕಾಲೋನಿ, ಶಿಂಶಾಪುರ, ಮಳವಳ್ಳಿ ತಾಲ್ಲೂಕು.	-ಅದೇ-	18.11.93
7.	ಕಮಲಾಪುರ್ಕರ್ ರವಿ ಕಮಲಾಪುರ, ಗುಲ್ಬರ್ಗಾ	-ಅದೇ-	"
8.	ಮಧುಮತಿ ಬಿ ಂ.81, ಸೀಮ್ಲದನ, ಮಾಗಡಿ ಕಾರ್ಡ್ ರಸ್ತೆ 11ನೇ ಮೈನ್, ವಿಜಯನಗರ, ಬೆಂಗಳೂರು 40.	ವಾಣಿಜ್ಯ ತೆರಿಗೆ ಅಧಿಕಾರಿ	16.1.1993
9.	ಸಿದ್ದಪ್ಪ ಎ.ಎ.ಓ. ಕೆ.ಇ.ಬಿ. ಕೇಂದ್ರ ಉಗ್ರಾಣ ವಿಭಾಗ, ತ್ಯಾಗರಾಜ್ ನಗರ, ಬೆಂಗಳೂರು.	-ಅದೇ-	"
10.	ಸಾಲಿ. ಎನ್.ಎಫ್ ವಿದ್ಯಾನಗರ, ಹುಬ್ಬಳ್ಳಿ	-ಅದೇ-	28.6.1993
11.	ತಿರುಪತಿ ದಾಸು ಪವಾರ್ ರೈಲ್ವೆ, ಸ್ಟೇಷನ್ ಬಳಿ, ಚಿತಾಪುರ ಗುಲ್ಬರ್ಗಾ.	ಡೆಪ್ಯುಟಿ ಸೂಪರಿಂಡೆಂಟ್ ಆಫ್ ಪೋಲೀಸ್	7.1.1993
12.	ನಾಯಕ ರವಿಕುಮಾರ್ ಹನುಮಂತಪ್ಪ ಮಧಿನೂರ ಪೋಸ್ಟ್, ಕೊಪ್ಪಳ್ ತಾಲ್ಲೂಕು.	ಡೆಪ್ಯುಟಿ ಸೂಪರಿಂಟೆಂಟ್ ಆಫ್ ಪೋಲೀಸ್	7.1.1993
13.	ಅನ್ನೆಗೇರಿ ಮಂಜುನಾಥ ಕರಿಯಪ್ಪ ಕೇರಾಫ್ ಸ್ಫೂರ್ತಿ ಸಂಪಾದಕರು, ಗದಗ್	-ಅದೇ-	"
14.	ಸುಂದರ್ ರಾಜ್ ಎ. ನಂ. 524, ಉರಗಂ ಅಂಚೆ, ಕೆ.ಜಿ.ಎಫ್.	ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಕ್ಷೇಮಾಭಿವೃದ್ಧಿ ಜಿಲ್ಲಾಧಿಕಾರಿ.	20-3-1993
15.	ಡಿಗ್ಗೆ ಶಿವಾಜಿ ನಂ. 30, ಲಕ್ಷ್ಮಿ ನಿವಾಸ, 2ನೇ ಕ್ರಾಸ್, 4ನೇ ಮೈನ್ ಗಂಗಪ್ಪ ಬ್ಲಾಕ್, ಗಂಗಾನಗರ, ಬೆಂಗಳೂರು,		

(ದರ್ಜೆ -2 ವ್ಯಂದ - 'ಬಿ')

1.	ವಾಗೋಮೋರಿ ಶಿವಮೂರ್ತಿ ಸಿದ್ದರಾಮಪ್ಪ ಎಂ.ಐ.ಜಿ. 100 ಅಗ್ರಹಾರ ದಾಸರಹಳ್ಳಿ ಎರಡನೇ ಘಟ್ಟ, ಬಸವೇಶ್ವರ ನಗರ, ಬೆಂಗಳೂರು.	ಸಹಾಯಕ ವಾಣಿಜ್ಯ ತೆರಿಗೆ ಅಧಿಕಾರಿ.	16.1.1993
2.	ಶಾಂತಕುಮಾರಿ ಎಂ.ಜಿ. ನಂ. 207 ಕಟಾರಿ ಪಾಳ್, ಕೋಲಾರ.	-ಅದೇ-	"
3.	ಎನ್. ಮಲ್ಲಿಕಾರ್ಜುನ ಸ್ವಾಮಿ ನಂ.238, ಒಂದನೇ ಘಟ್ಟ, ಹುಡುಕೋ, ಕುವೆಂಪು ನಗರ, ಮೈಸೂರು.	-ಅದೇ-	"
4.	ಎಂ. ಗೀತಾ ಸರ್ಕಾರಿ ಪಿ.ಯು.ಸಿ. ಕಾಲೇಜು, ಯಲಹಂಕ, ಬೆಂಗಳೂರು.	-ಅದೇ-	"
5.	ಎಂ. ಭಾಗ್ಯ ನಾಯಕ್ ನಂ.ಎಲ್-43, ಕೆ.ಹೆಚ್.ಬಿ. ಕಾಲೋನಿ, ಗಾಂಧಿನಗರ, ಬಳ್ಳಾರಿ.	-ಅದೇ-	"
6.	ಎಂ. ವೆಂಕಟರಾಮ್ ಮಾಡೆಲ್ ಹೌಸ್, 31, ಶಿವಯೋಗಿ- ಸ್ವಾಮಿ ಮುಖ್ಯ ರಸ್ತೆ, ಗಾಂಧಿನಗರ, ಮೈಸೂರು.	-ಅದೇ-	"
7.	ಕಾಂಬಳೆ ಶ್ರೀಕಾಂತ್ ಶಂಕರ್, ನಾಗನೂರು (ಕೆ.ಎಂ.) ಹುದ್ದೇರಿ, ತಾಲ್ಲೂಕು.	-ಅದೇ-	"
8.	ವಿಶ್ವನಾಥ್ ತಾಯಪ್ಪ ನಂ.1 6190:4, ಇಂದಿರಾನಗರ, ಸ್ಟೇಷನ್ ರಸ್ತೆ, ರಾಯಚೂರು.	ಸಹಾಯಕ ವಾಣಿಜ್ಯ ತೆರಿಗೆ ಅಧಿಕಾರಿಗಳು	16.1.1993
9.	ಬಾರಿಕೇರಿ ಹೆಚ್.ಬಿ. ಕೇರಾಫ್ ಡಾ-ಐ.ಎನ್. ಪಟಾಣ್, ವಿದ್ಯಾವಿಹಾರ, ಹೊನ್ನವಾಥ ಬೆಳಗಾಂ	ಸಹಾಯಕ ವಾಣಿಜ್ಯ ತೆರಿಗೆ	28-6-1993
10.	ಶ್ರೀಧರ್ ನಾಯಕ್, ಚಾರ್ಮಾಡಿ ಅಂಚೆ, ಬೆಳ್ತಂಗಡಿ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ.	ಉದ್ಯೋಗ ಅಧಿಕಾರಿ	11-10-1993
11.	ಧನರಾಜು ವಿ.ಕೆ. ನಿಟ್ಟುಹಳ್ಳಿ ಅಂಚೆ, ದಾವಣಗೆರೆ	-ಅದೇ-	"
12.	ಎಸ್. ಪಾಲಯ್ಯ, ಬಿ.ಡಿ.ಓ. ಆಫೀಸ್ ಹಿಂಭಾಗ ಚಳ್ಳಕೆರೆ.	ತಹಸೀಲ್ದಾರ್	14.9.1993
13.	ಬಿ. ರಾಮು ತಹಶೀಲ್ದಾರ್ ದರ್ಜೆ, ಪುತ್ತೂರು	-ಅದೇ-	ನೇಮಕಾತಿಗೆ ಹಾಜರಾಗಿಲ್ಲ.
14.	ನಾಗರಾಜ್ ಕೆ.ಆವ್ಲಹಳ್ಳಿ, ನೇರಳೆಕೆರೆ ಪೋಸ್ಟ್ ಮಧುಗಿರಿ ತಾಲ್ಲೂಕು, ತುಮಕೂರು ಜಿಲ್ಲೆ.	-ಅದೇ-	6-1-1993

15.	ಶೈಲಜ ಸಿ.ಪಿ. ನಂ. 1839, 6ನೇ ಮೈನ್, ಡಿ.ಬ್ಲಾಕ್, ರಾಜಾಜಿನಗರ, 2ನೇ ಫಟ್ಟ, 1ನೇ ಬ್ಲಾಕ್ ಬೆಂಗಳೂರು-10.	-ಅದೇ-	23-9-1993
16.	ಶಿವಯ್ಯ.ಬಿ. ಹೊಸ ಎ.ಜಿ. ರಸ್ತೆ, ತಲಕಾಡು, ಟಿ. ನರಸೀಪುರ ತಾಲ್ಲೂಕು	-ಅದೇ-	14-9-1993
17.	ಟಿ. ಉಪೇಂದ್ರ ನಾಯಕ್ ಕಾಳಮ್ಮ ದೇವಸ್ಥಾನ ರಸ್ತೆ, ಕುಳಿನಕಟ್ಟೆ, ವೃತ್ತ ಚಿತ್ರದುರ್ಗ	-ಅದೇ-	"
18.	ಆರ್. ರಘು ನಂ. 48, ರಾಮಸ್ವಾಮಿ ಲೇಔಟ್, ಹೊಸ ಬೈಯಪ್ಪನಹಳ್ಳಿ, ಪೋಸ್ಟ್, ಇಂದಿರಾನಗರ ಬಡಾವಣೆ, ಬೆಂಗಳೂರು	ಕೈಗಾರಿಕಾ ಮತ್ತು ವಾಣಿಜ್ಯ ಸಹಾಯಕ ನಿರ್ದೇಶಕರು	28-4-1993
19.	ಬಸವರಾಜು ಕೆ.ಎಲ್. ಹುಕ್ಕೂರು ಟಿ. ನರಸೀಪುರ ತಾಲ್ಲೂಕು.	-ಅದೇ-	"
20.	ಹೆಚ್.ಕೆ. ರುದ್ರಪ್ಪ ಮುನಿಸಿಪಲ್ 1ನೇ ಗ್ರೇಡ್ ಕಾಲೇಜು, ರಾಮನಗರ.	-ಅದೇ-	"
21.	ಎಸ್. ಪುಟ್ಟಸ್ವಾಮಿ ನಂ. 80 ಕೆ.ಹೆಚ್.ಬಿ. ಕಾಲೋನಿ, 1ನೇ ಫಟ್ಟ, ಕೈಗಾರಿಕಾ ವಲಯ ವಿಶ್ವೇಶ್ವರ ನಗರ, ಮೈಸೂರು.	-ಅದೇ- ತಪಾಸಣೆಗೆ ಹಾಜರಾಗಿಲ್ಲ	ವೈದ್ಯಕೀಯ
22.	ಯಮುನಾ ಜಿ. ನಂ. 249, 8ನೇ ಮುಖ್ಯ ರಸ್ತೆ 3ನೇ ಬ್ಲಾಕ್, 4ನೇ ಫಟ್ಟ, ಪಶ್ಚಿಮ ಕಾರ್ಡ್‌ರಸ್ತೆ ಬಸವೇಶ್ವರ ನಗರ, ಬೆಂಗಳೂರು.	ಕೈಗಾರಿಕಾ ಮತ್ತು ವಾಣಿಜ್ಯ ಸಹಾಯಕ ನಿರ್ದೇಶಕರು	28.4.199[illegible]
23.	ಮಂಜುಳಾ. ಎನ್. ನಂ. 386, ಬಿ. 11ನೇ ಅಡ್ಡ ರಸ್ತೆ, 20ನೇ ಮುಖ್ಯ ರಸ್ತೆ, ಜೆ.ಪಿ. ನಗರ. 2ನೇ ಫಟ್ಟ, ಬೆಂಗಳೂರು.	-ಅದೇ-	"
24.	ಶ್ರೀರಂಗಯ್ಯ ಎಂ. ಎಂ.ಕೆ. ನಂ. 81 ಎಲ್‌ಐಬಿ. ಕೆ.ಹೆಚ್.ಬಿ. ಕಾಲೋನಿ, 6ನೇ ಅಡ್ಡರಸ್ತೆ 1ನೇ ಫಟ್ಟ ಬಸವೇಶ್ವರ ನಗರ, ಬೆಂಗಳೂರು.	-ಅದೇ-	"
25.	ಎಸ್.ಆರ್. ರಾಮಸ್ವಾಮಿ ನಂ. 267 :1, ಹಳೇ ಬಡಾವಣೆ ಕೆ.ಇ.ಬಿ. ಕಾಲೋನಿ, ಹಿಂಭಾಗ, ಕೋಲಾರ.	-ಅದೇ-	"

26.	ಶ್ರೀ ಎಂ. ಮಲ್ಲಯ್ಯ ತುದೆ : ಮಾರಯ್ಯ ಬೋಗನಹಳ್ಳಿ, ಭಟಪತಿ ಪೋಸ್ಟ್ ಚಳ್ಳಕೆರೆ ತಾಲ್ಲೂಕು ಚಿತ್ರದುರ್ಗ ಜಿಲ್ಲೆ	ಕೃಷಿ ಅಧಿಕಾರಿ	11.9.90
27.	ಶ್ರೀ ಬಿ. ಶಿವರಾಜು ವಲಗೇರಹಳ್ಳಿ, ಮದ್ದೂರು ತಾಲ್ಲೂಕು ಮಂಡ್ಯ ಜಿಲ್ಲೆ	ಅದೇ-	"
28.	ಶ್ರೀ ಎಂ. ಜಂಗರಾಮಯ್ಯ ನಂ. 3023, 13ನೇ ಮೈನ್, 3ನೇ ಕ್ರಾಸ್, ಅತ್ತಿಗುಪ್ಪೆ, ಆರ್.ಪಿ.ಸಿ. ಬಡಾವಣೆ ಬೆಂಗಳೂರು-40.	-ಅದೇ-	"
29.	ಡಾ॥ ಬಸವಲಿಂಗಪ್ಪ ಪಶು ಚಿಕ್ಸಿತ್ಸಾಲಯ, ಪಣತ್ತೂರು, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ,	ಪಶುವೈದ್ಯ ಅಧಿಕಾರಿ	2-4-1991

ಕರ್ನಾಟಕ ಸಿವಿಲ್ ಸೇವೆ (ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡಗಳ ಪ್ರತಿಭಾವಂತರನ್ನು ಕೆಲವೊಂದು ಗುಂಪು - 'ಎ' ಮತ್ತು ಗುಂಪು 'ಬಿ' ಹುದ್ದೆಗಳಿಗೆ ನೇರ ನೇಮಕಾತಿ) ನಿಯಮಗಳು, 1985 ರಡಿ 1983-84ನೇ ಸಾಲಿನ ಆಯ್ಕೆ ಪಟ್ಟಿ.

ಕ್ರ. ಸಂ.	ಹೆಸರು ಮತ್ತು ವಿಳಾಸ	ಹುದ್ದೆ

(ವೃಂದ - 'ಎ')

1)	ಶ್ರೀ ಪಿ. ರಾಜೇಂದ್ರನ್. ಬಿ.ಎ. ಥೇರಾಫ್ ಸುಂದರ್‌ರಾಜ್, ಪಿ.ಬಿ. ನಂ. 34, 'ಎನ್'- ಬ್ಲಾಕ್, ಚಾಂಪಿಯನ್ ರೀಫ್ಸ್ ಪೋಸ್ಟ್, ಕೆ.ಜಿ.ಎಫ್, ಕೋಲಾರ ಜಿಲ್ಲೆ, ಪಿನ್ ಕೋಡ್ - 563117.	ಅಸಿಸ್ಟೆಂಟ್ ಕಮಾಂಡೆಂಟ್

(ವೃಂದ - 'ಬಿ')

1)	ಶ್ರೀಮತಿ ಕೆ. ಸಾವಿತ್ರಿ, ಎಂ.ಎ ಕೆ.ಎಂ. ಕೋಟಿ ಇವರ ಮಗಳು ನಂ. 10, 1ನೇ ಕ್ರಾಸ್ ಪೆಮ್ಮಯ್ಯ ಬ್ಲಾಕ್, ಜೆ.ಸಿ. ನಗರ, ಬೆಂಗಳೂರು-46.	ಸಹಕಾರ ಸಂಘಗಳ ಸಹಾಯಕ ನಿಬಂಧಕರು.
2)	ಶ್ರೀ ಹೆಚ್.ಕೆ. ನರಸಿಂಹಮೂರ್ತಿ, ಎಂ.ಎ. ಹೆಚ್.ಕೆ. ಕರಿಯಣ್ಣನವರ ಮಗ, ಗುಬ್ಬಿ ಹೋಬಳಿ ತುಮಕೂರು-560026.	ಡೆಪ್ಯುಟಿ ಸೂಪರಿಂಟೆಂಡೆಂಗ್ ಆಫ್ ಎಕ್ಸೈಡ್,
3)	ಶ್ರೀ ಬಿ.ಹೆಚ್. ನರಸಿಂಹಮೂರ್ತಿ ಎಂ.ಎಸ್.ಸಿ. ನಂ. 8, 1ನೇ ಮೈನ್ 1ನೇ ಕ್ರಾಸ್, ವಾಲ್ಮೀಕಿ ನಗರ, ಮೈಸೂರು ರಸ್ತೆ	ಜಿಲ್ಲಾ ಮಾರುಕಟ್ಟೆ ಅಧಿಕಾರಿ

	ಬೆಂಗಳೂರು - 560026.	
4)	ಶ್ರೀ ಎ.ಆರ್. ಪುಷ್ಪಲತಾ ಎಂ.ಎಸ್.ಸಿ. ನಂ. 180:1, 4ನೇ 'ಎ' ಮೈನ್ 3ನೇ ಬ್ಲಾಕ್, 3ನೇ ಸ್ಟೇಜ್, ಬಸವೇಶ್ವರ ನಗರ, ಬೆಂಗಳೂರು-79	ಸಹಕಾರ ಸಂಘಗಳ ಸಹಾಯಕ ನಿಬಂಧಕರು
5)	ಶ್ರೀ ಕೆ.ಬಿ. ಸುರೇಶ್ ಕುಮಾರ್ ಎಂ.ಕಾಂ. ಲೆಕ್ಚರರ್ ಇನ್ ಕಾಮರ್ಸ್, ಬಿ.ಎಸ್.ಎಂ. ಕಾಲೇಜು, 27ನೇ ಕ್ರಾಸ್, ಬನಶಂಕರಿ 2ನೇ ಸ್ಟೇಜ್, ಬೆಂಗಳೂರು - 560070.	ಜಿಲ್ಲಾ ಮಾರುಕಟ್ಟೆ
6)	ಶ್ರೀ ಹೆಚ್. ಕುಬೇರ್ ನಾಯ್ಕ ಎಂ.ಕಾಂ. ಪುನಚಘಟ್ಟ (ತಾಂಡ) ಹರಪ್ಪನಹಳ್ಳಿ ತಾಲ್ಲೂಕು, ಬಳ್ಳಾರಿ ಜಿಲ್ಲೆ - 563125	-ಅದೇ-

ಶ್ರೀ ಹೆಚ್.ಡಿ. ದೇವೇಗೌಡ : 'ಅ' ಮತ್ತು 'ಇ'ಗೆ, ಹೀಗೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಕೊರತೆ ಪ್ರಮಾಣವನ್ನು ಅನುಸರಿಸಿ 1984 ರಿಂದೀಚೆಗೆ ಶೈಕ್ಷಣಿಕ ವರ್ಷಗಳಿಗೆ ಸಂಬಂಧಿಸಿದಂತೆ ನೇಮಕಾತಿಯನ್ನು ಮಾಡುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆ. ನಾನು ಅದರ ವಿವರವನ್ನು ಕೊಟ್ಟುಬಿಡುತ್ತೇನೆ. ಈಗ, ಖಾಲೀ ಇರತಕ್ಕಂಥ ಹುದ್ದೆಗಳು ಲೇಬರ್ ಆಫೀಸರ್ ಎಸ್.ಟಿ. 1, ಎಂಪ್ಲಾಯ್‌ಮೆಂಟ್ ಆಫೀಸರ್ ಎಸ್.ಟಿ.1, ಡೆಪ್ಯೂಟಿ ಸೂಪರಿಡೆಂಟ್ ಆಫ್ ಪ್ರಿಸನ್ ಎಸ್.ಸಿ.1, ಚೀಫ್ ಆಫೀಸರ್ ಗ್ರೇಡ್-1 ಎಸ್.ಸಿ.6, ಸಹಕಾರ ಸಂಘಗಳ ಸಹಾಯಕ ನಿಬಂಧಕರು ಎಸ್.ಸಿ.1 ಅಸಿಸ್ಟೆಂಟ್ ಡೈರಕ್ಟರ್ ಯೂತ್ ಸರ್ವಿಸಸ್ ಎಸ್.ಟಿ.1 ಒಟ್ಟು 11 ಹುದ್ದೆಗಳು ಖಾಲೀ ಇದೆ. ಕಂದಾಯ ಇಲಾಖೆಯಿಂದ ಸ್ವಲ್ಪ ಇನ್‌ಫರ್‌ಮೇಶನ್ ಬಂದಿಲ್ಲ ಸರ್ಕಾರದ ಹತ್ತಿರ ಇರುವಷ್ಟು ಮಾಹಿತಿಯನ್ನು ಮಂಡಿಸಿದ್ದೇನೆ.

12.40 ಪಿ.ಎಂ.

ಶ್ರೀ ಎಂ.ಹೆಚ್. ಜಯಪ್ರಕಾಶ್ ನಾರಾಯಣ : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ತಮ್ಮ ಉತ್ತರದಲ್ಲಿ 1984-85ನೇ ಸಾಲಿನಿಂದ ಈ ಆದೇಶ ಜಾರಿಯಲ್ಲಿದ್ದರೂ ಸಹ ಹತ್ತು ವರ್ಷಗಳ ಕಾಲ ಯಾವ ನೇಮಕವನ್ನೂ ಮಾಡಿಲ್ಲ ಎಂದು ಹೇಳಿದ್ದಾರೆ. 1993-94ನೇ ಸಾಲಿನಲ್ಲಿ ಕೇವಲ ಕ್ಲಾಸ್ - 2 ಇಪ್ಪತ್ತೊಂಭತ್ತು ಜನ. ಕ್ಲಾಸ್ - 1, ಕ್ಲಾಸ್ - 2 , ಕ್ಲಾಸ್ - 3 ಮತ್ತು ಕ್ಲಾಸ್ - 4ರಲ್ಲಿ ಬಹಳ ಕಡಿಮೆ ಇರುವುದರಿಂದ, ಇದಕ್ಕಾಗಿ ಒಂದು ವಿಶೇಷ ರೀತಿಯ ವ್ಯವಸ್ಥೆಯನ್ನು ಮಾಡಿ, ಮಾನ್ಯ ವಿರ್ಗಿಯವರು ಹೇಳಿದ ಹಾಗೆ ಸ್ಪೆಷಲ್ ರಿಕ್ರೂಟ್‌ಮೆಂಟ್ ರೀತಿಯಲ್ಲೋ ಅಥವಾ ಬ್ಯಾಕ್‌ಲಾಗ್‌ನ್ನು ಭರ್ತಿ ಮಾಡತಕ್ಕಂತಹ ರೀತಿಯಲ್ಲೋ ಇವರಿಗೆ ಹೆಚ್ಚಿಗೆ ಅವಕಾಶ ಕೊಡಬೇಕು. ಮತ್ತು ನಾವು ಮಾಡಿದ ಈ ನಿಯಮಗಳನ್ನು ಕಾರ್ಯಗತ ಮಾಡದೇ ಇರತಕ್ಕಂತಹ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಈಗ ಹತ್ತು ವರ್ಷಗಳ ಪೀರಿಯಡ್‌ನಲ್ಲಿ ಕೇವಲ ನಾಲ್ಕು - ನಾಲ್ಕು ಜನರನ್ನು ನೇಮಿಸಿದಂತಾಗಿದೆ. ಮಾನ್ಯ ಮುಖ್ಯಮಂತ್ರಿಗಳು ತಮ್ಮ ಉತ್ತರದಲ್ಲಿ recruitment for the academic year 1994-95 on-wards is under consideration of the Government... ಎಂದು ಹೇಳಿದ್ದಾರೆ. ಷಾರ್ಟ್‌ಫಾಲ್ ಅಂದರೆ ವೆಕೆನ್ಸಿಗಳು ಇಲ್ಲ ಎಂತಲೋ ಅಥವಾ ಇದನ್ನು ಯಾವ ರೂಪದಲ್ಲಿ ನೀವು ಭರ್ತಿ ಮಾಡುತ್ತೀರಿ? ಯೂನಿವರ್ಸಿಟಿಗೆ ಬರೆಯುತ್ತೀರಾ? ಫರ್ಸ್ಟ್ ರ್ಯಾಂಕ್, ಗೋಲ್ಡ್ ಮೆಡಲ್ ತೆಗೆದುಕೊಂಡು ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೂ ಇವತ್ತು ಅಪರ್ಚುನಿಟಿ ಸಿಕ್ಕಿಲ್ಲ. ಅಂಥಾದ್ದರಲ್ಲಿ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಸಾಮಾಜಿಕ ನ್ಯಾಯವನ್ನು ಎತ್ತಿ ಹಿಡಿದಿದ್ದೇವೆ ಎಂದು ಹೇಳಿದ್ದಾರೆ. ಈ ನ್ಯಾಯವನ್ನು ಎತ್ತಿ ಹಿಡಿಯಬೇಕಾದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗಕ್ಕೆ ಯಾವ ಯಾವ ಸವಲತ್ತುಗಳು ಜಾರಿಯಲ್ಲಿವೆ ಅವೆಲ್ಲವನ್ನೂ ಜಾರಿ ಮಾಡಿ ಅವರಿಗೆ ರಕ್ಷಣೆ

ಕೊಡುತ್ತೇವೆ ಎನ್ನುವ ಭರವಸೆಯನ್ನು ಈ ಸದನದಲ್ಲಿ ಕೊಡುತ್ತೀರೆಂದು ನಾನು ಭಾವಿಸುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ : 1983 ರಲ್ಲಿ ಅಧಿಕಾರಕ್ಕೆ ಬಂದಂತಹ ಅಂದಿನ ಸರ್ಕಾರ ಯಾರು ಯೂನಿವರ್ಸಿಟಿಯಲ್ಲಿ ಪೋಸ್ಟ್ ಗ್ರಾಜ್ಯುಯೇಟ್‌ನಲ್ಲಿ ಅತ್ಯಂತ ಪ್ರಥಮ ದರ್ಜೆಯಲ್ಲಿ ಪಾಸು ಮಾಡುತ್ತಾರೋ ಅಂತಹವರಿಗೆ ನೇರ ನೇಮಕಾತಿ ಕೊಡತಕ್ಕ ಒಂದು ವ್ಯವಸ್ಥೆಯನ್ನು ಜಾರಿಗೆ ತಂದಿದೆ. ಅದರ ಅಂಗವಾಗಿ ಕೆಲವು ನಿರ್ಣಯ ಮಾಡಿದ್ದೇವೆ. ರೂಲ್ಸ್‌ನ್ನು ಫ್ರೇಮ್ ಮಾಡಿದ್ದುದು ದಿನಾಂಕ 14.4.85ರಲ್ಲಿ ಸೆಲೆಕ್ಷನ್ ಮೇಡ್ 1985ರಲ್ಲಿ, Rules were challenged in 1986. K.A.T. upheld the rules in 1989. Based on the directions of KAT, detailed guidelines were issued on 11.7.89. Selections were made in 1991. Selection challenged in Supreme Court. Supreme Court disposed of th case in 1992.

1993ರಲ್ಲಿ ಒಂದು ಬ್ಯಾಚ್ ಅಪಾಯಿಂಟ್‌ಮೆಂಟ್ ಮಾಡಿದ್ದೇವೆ. During academic year appointment were made.

'ಎ' ಗುಂಪಿನಿಂದ 15 ಮತ್ತು 'ಬಿ' ಗುಂಪಿನಿಂದ 26. Action is being taken to complete the recruitment of academic year 1984-85 to 1993-95.

ಈಗ ಇದರೊಳಗೆ ಒಂದು ಕಂಡೀಷನ್ ಏನಿದೆ ಎಂದರೆ ಯಾವ ಇಲಾಖೆಯಲ್ಲಿ 'ಎ' ಮತ್ತು 'ಬಿ' ಶ್ರೇಣಿಯಲ್ಲಿ ಎಸ್.ಸಿ.ಎಸ್.ಟಿ. ಹುದ್ದೆ ಶೇಕಡಾ 15 3 ಭರ್ತಿ ಆಗಿಲ್ಲವೋ ಅಲ್ಲಿ ಮಾತ್ರ ಅಪ್ಲೈ ಆಗುತ್ತದೆ. ಆ ಷರತ್ತಿನ ಮೇಲೆ ಈ ರೂಲ್ಸ್‌ನ್ನು ಅಪ್ರೂಲ್ ಅಲ್ಲಿ ಮಾತ್ರ ಅಪ್ಲೈ ಆಗುತ್ತದೆ. ಆ ಷರತ್ತಿನ ಮೇಲೆ ಈ ರೂಲ್ಸ್‌ನ್ನು ಅಪ್ರೂವ್ ಮಾಡಿದ್ದಾರೆ. ಪರಿಶಿಷ್ಟ ಪಂಗಡದ ಹುದ್ದೆಗಳು ಈಗಾಗಲೇ ಶೇಕಡ 3 ರಷ್ಟು ಭರ್ತಿ ಆಗಿದ್ದರೆ ಅಲ್ಲಿ ಅಪ್ಲೈ ಆಗುವುದಿಲ್ಲ. ಇದು ಈಗಿರುವ ನಿಯಮಗಳು. ಅದರ ವ್ಯಾಪ್ತಿಯಲ್ಲಿ ಇರುವ ವಿಕೇನ್ನಿ ಹೇಳಿದ್ದೇನೆ. ಒಟ್ಟು 11 ವಿಕೇನ್ನಿ ಇವೆ. ಅವನ್ನು ಭರ್ತಿ ಮಾಡಲಿಕ್ಕೆ ಪ್ರಯತ್ನ ಪಡುತ್ತೇವೆ.

ಶ್ರೀ ಎಂ.ಹೆಚ್. ಜಯಪ್ರಕಾಶ್ ನಾರಾಯಣ : ಸ್ವಾಮಿ, ಈಗಾಗಲೇ ಎಸ್.ಸಿ. ಎಸ್.ಟಿ.ಗೆ ರಿಕ್ರೂಟ್‌ಮೆಂಟ್ ಮೀಸಲಾತಿ ಶೇಕಡ 15.3ರ ಪ್ರಮಾಣದಲ್ಲಿದ್ದು ಇದನ್ನು ನಾನು ಭರ್ತಿ ಮಾಡಲಿಕ್ಕೆ ಅವಕಾಶ ಕಲ್ಪಿಸುತ್ತೇನೆ ಎಂದು ಅಭಯವನ್ನು ನೀಡುತ್ತಿದ್ದೀರಿ. ಆದರೆ ಈಗ ರಾಜ್ಯದಲ್ಲಿ ಕ್ಲಾಸ್ - 1, ಕ್ಲಾಸ್ - 2, ಕ್ಲಾಸ್ - 3 ಮತ್ತು ಕ್ಲಾಸ್ - 4 ರಲ್ಲಿ ಎಸ್.ಸಿ. ಎಸ್.ಟಿ.ಯವರು ಯಾವ ಯಾವ ಪ್ರಮಾಣದಲ್ಲಿದ್ದಾರೆ.

ಶ್ರೀ ಹೆಚ್.ಡಿ. ದೇವೇಗೌಡ : ಕ್ಲಾಸ್ - 1 ಮತ್ತು ಕ್ಲಾಸ್ - 2ಗೆ ಮಾತ್ರ ನೇರ ನೇಮಕಾತಿ ಇದೆ. ಕ್ಲಾಸ್ - 3 ಮತ್ತು ಕ್ಲಾಸ್ - 4 ಕ್ಕೆ ಇದು ಅನ್ವಯವಾಗುವುದಿಲ್ಲ. ಇದಕ್ಕೆ ಸಪರೇಟ್ ಪ್ರಶ್ನೆ ಕೇಳಿದರೆ ಉತ್ತರ ಹೇಳಬಹುದು.

ಬೆಣ್ಣೆ ತೊರೆ ನೀರಾವರಿ ಯೋಜನೆ

244 - ಶ್ರೀ ರೇವುನಾಯಕ್ ಬೆಳಮಗಿ (ಕಮಲಾಪುರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಣ್ಣೆತೋರೆ ನೀರಾವರಿ ಯೋಜನೆಯ ಅಂದಾಜು ವೆಚ್ಚವೆಷ್ಟು, ನೀರಾವರಿ ಪ್ರದೇಶವೆಷ್ಟು ಹಾಗೂ ಇದಕ್ಕೆ ಖರ್ಚಾಗಿರುವ ಹಣವೆಷ್ಟು;*

ಆ) *ಈ ಯೋಜನೆಗೆ ಪ್ರಸ್ತುತ ಸಾಲಿನಲ್ಲಿ ಮಂಜೂರಾದ ಹಣವೆಷ್ಟು, ಖರ್ಚಾದ ಹಣವೆಷ್ಟು ಮತ್ತು ಈ ಯೋಜನೆಯಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿ ಎಷ್ಟು;*